ಜಿಲ್ಲಾಧಿಕಾರಿಗಳು, ರಾಯಚೂರು ರವರ ಕಾರ್ಯಾಲಯದ ನಡವಳಿಗಳು.

ವಿಷಯ : 2010-11 ನೇಯ ಸಾಲಿನ ಪ್ರಕೃತಿ ವಿಕೋಪ ಯೋಜನೆಯ ಪ್ರವಾಹ ಪರಿಹಾರದಡಿ ಮೂಲಭೂತ ಸೌಲಭ್ಯಗಳ ಹಾನಿಯಾಗಿರುವ ಕಾಮಗಾರಿಗಳ ತುರ್ತು ದುರಸ್ಥಿ ಕಾರ್ಯ ಕೈಗೊಳ್ಳಲು ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : 1)ಸರ್ಕಾರದ ಆದೇಶ ಸಂ :ಕಂಇ/350/ಟಿಎನ್ ಆರ್/2010 ದಿನಾಂಕ :30-8-2010.
2)ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ರಾಯಚೂರು ಇವರ ದಿನಾಂಕ : 15-9-2010.

**

**ಪ್ರಸ್ತಾವನೆ :**

2010-11 ನೇಯ ಸಾಲಿನಲ್ಲಿ ಅಗಸ್ಟ ಮಾಹೆಯಲ್ಲಿ ಸುರಿದ ಭಾರಿ ಮಳೆಯಿಂದ ಮಾನವ ಹಾನಿ, ಜಾನುವಾರು ಹಾನಿ, ಮನೆ ಹಾನಿ ಹಾಗೂ ಮೂಲಭೂತ ಸೌಲಭ್ಯಗಳ ಹಾನಿಯಾಗಿರುವ ಕಾಮಗಾರಿಗಳನ್ನು ತುರ್ತಾಗಿ ಆದ್ಯತೆ ಮೇರೆಗೆ ಕೈಕೊಳ್ಳಲು ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಈ ಜಿಲ್ಲೆಗೆ ರೂ.100.00 ಲಕ್ಷಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಯೋಜನೆ ಅಡಿ ಪ್ರಸ್ತುತ ಲಭ್ಯವಿರುವ ಅನುದಾನವನ್ನು ಆಧರಿಸಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಮಳೆಯಿಂದ ಹಾನಿಯಾಗಿರುವ ಕಾಮಗಾರಿಗಳ ಪಟ್ಟಿಯನ್ನು ಸಲ್ಲಿಸಲು ಜಿಲ್ಲೆಯ ಎಲ್ಲಾ ಕ್ಷೇತ್ರಗಳ ಮಾನ್ಯ ವಿಧಾನ ಸಭಾ ಸದಸ್ಯರುಗಳಿಗೆ ದೂರವಾಣಿ ಮೂಲಕ ಕೋರಲಾಗಿರುತ್ತದೆ.

ಉಲ್ಲೇಖ (2) ರನ್ವಯ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ರಾಯಚೂರು ಇವರು ಸಿಂಧನೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಾನಿಯಾದ ಸಿ.ಡಿ. ಮತ್ತು ಸೇತುವೆ ದುರ್ಸ್ಥಿಯ ಒಟ್ಟು (11) ಕಾಮಗಾರಿಗಳಿಗೆ ರೂ.25.00 ಲಕ್ಷ ಮೊತ್ತಕ್ಕೆ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆಗಾಗಿ ಸಲ್ಲಿಸುತ್ತಾ ಅನುದಾನ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ. ಆದ್ದರಿಂದ ಸದರಿ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಶೇಕಡ 50 ರಷ್ಟು ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ. ಕಾರಣ ಈ ಕೆಳಗಿನಂತೆ ಆದೇಶ.

**: ಆದೇಶ :**

ಸಂ :ಕಂದಾಯ/ನೈ.ವಿ/ಪ್ರವಾಹ/50/2010-11

ದಿನಾಂಕ : 23-9-2010.

ಪ್ರಸ್ತಾವನೆಯಲ್ಲಿ ಹಾಗೂ ಉಲ್ಲೇಖಿತ ಪತ್ರಗಳಲ್ಲಿ ವಿವರಿಸಿದಂತೆ 2010-11 ನೇಯ ಸಾಲಿನ ಪ್ರಕೃತಿ ವಿಕೋಪ ಯೋಜನೆಯ ಪ್ರವಾಹದ ಅಡಿಯಲ್ಲಿ ಭಾರಿ ಮಳೆಯಿಂದ ಹಾನಿಯಾದ ಮೂಲಭೂತ ಸೌಕರ್ಯಗಳಾದ ಸಿ.ಡಿ. ಮತ್ತು ಸೇತುವೆ ತುರ್ತು ರಿಪೇರಿ ಕಾಮಗಾರಿಗಳ ಕ್ರಿಯಾ ಯೋಜನೆಗೆ ರೂ. 25.00 ಲಕ್ಷಕ್ಕೆ ಅನುಮೋದನೆ ನೀಡಲಾಗಿದೆ. ಹಾಗೂ ತುರ್ತು ಅವಶ್ಯಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಶೇಕಡ 50 ರಷ್ಟು ಅನುದಾನ ರೂ. 12.50 ಲಕ್ಷ (ರೂ. ಹನ್ನೆರಡು ಲಕ್ಷ ಐವತ್ತು ಸಾವಿರ ಮಾತ್ರ) ಗಳು ಈ ಕಾರ್ಯಾಲಯದ ಪಿ.ಡಿ. ಖಾತೆ ಸಂ : H902595 ದಿನಾಂಕ : 24.9.10 ರ ಮೂಲಕ ಬಿಡುಗಡೆ ಮಾಡಿ ಈ ಆದೇಶದೊಂದಿಗೆ ಲಗತ್ತಿಸಲಾಗಿದೆ.

ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ರಾಯಚೂರು ಇವರು ಈ ಕೆಳಗೆ ಸೂಚಿಸಿದ ನಿಭಂಧನೆಗಳನ್ನು ತಪ್ಪದೇ ಪಾಲಿಸಬೇಕೆಂದು ತಿಳಿಯಪಡಿಸಿದೆ.

**ನಿಬಂಧನೆಗಳು :**

1)ಈಗ ಮಂಜೂರಾತಿ ನೀಡಿದ ಕಾಮಗಾರಿಗಳನ್ನು ಸರಕಾರದಿಂದ ಕಾಲಕಾಲಕ್ಕೆ ಹೊರಡಿಸಿದ ನಿರ್ದೇಶನ/ಆದೇಶ/ನಿಯಮಗಳು/ಕಾಯ್ದೆಗಳನ್ನು ತಪ್ಪದೇ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

2)ಸದರಿ ಮಂಜೂರಾತಿ ನೀಡಿದ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ಕೂಡಲೇ ಒಂದು ವಾರದೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

2010-11ನೇ ಸಾಲಿನ ಆಗಸ್ಟ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದ ಹಾನಿಗೊಳಗಾದ ರಸ್ತೆ ಮತ್ತು ಸೇತುವೆಗಳ
ಕ್ರಿಯಾ ಯೋಜನೆ ಸಿಂಧನೂರ ತಾಲೂಕ

| ಕ್ರ.ಸಂ. | ಕಾಮಗಾರಿಯ ಹೆಸರು | ರಸ್ತೆ / ಸೇತುವೆ (ಉದ್ದ/ಸಂ.) | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಷರಾ |
|---|---|---|---|---|
| 1 | 2 | 3 | 4 | 5 |
| | ಸಿಂಧನೂರು ವಿಧಾನ ಸಭಾ ಕ್ಷೇತ್ರ | | | |
| | ಆದ್ಯತೆ ಪಟ್ಟಿ | | | |
| 1 | ಚಿರತನಾಳ ರಸ್ತೆಯಲ್ಲಿ ಸೇತುವೆ ದುರಸ್ತಿ | 1 ಸಂ. | 1.00 | |
| 2 | ಸಿದ್ರಾಂಪುರ -ಭೀಮರಾಜ ಕ್ಯಾಂಪ್ ರಸ್ತೆಯಲ್ಲಿ ಕೆಳಮಟ್ಟದ ಸೇತುವೆ ದುರಸ್ತಿ | 1 ಸಂ. | 2.00 | |
| 3 | ಹಂಚಿನಾಳ (ಕೆ)ಯಿಂದ ಗಾಂಧೀನಗರ ರಸ್ತೆಯಲ್ಲಿ ಸೇತುವೆ ದುರಸ್ತಿ | 1.00 ಕಿ.ಮಿ | 2.00 | |
| 4 | ಹಂಚಿನಾಳದಿಂದ ರಂಗಾಪೂರ ಕ್ಯಾಂಪ್ ರಸ್ತೆಯಲ್ಲಿ ಸೇತುವೆ ದುರಸ್ತಿ | 1 ಸಂ. | 2.00 | |
| 6 | ಆರ್.ಹೆಚ್.ಕ್ಯಾಂಪ್ 4 ರಿಂದ ತಿಮ್ಮಾಪುರ ಸಿ.ಡಿ.ದುರಸ್ತಿ | 1 ಸಂ. | 2.00 | |
| 7 | ಆರ್.ಜಿ.ರಸ್ತೆಯಿಂದ -ಹಟ್ಟಿ ಗ್ರಾಮದ ಕೂಡುವ ರಸ್ತೆ ಸಹಿತ ಸಿ.ಡಿ. ದುರಸ್ತಿ | 2 ಕಿ.ಮಿ / 1 ಸಂ. | 1.50 | |
| 8 | ಎಲೆಕೂಡ್ಲಿಗಿ ಗ್ರಾಮಕ್ಕೆ ತಡಗೋಡೆ ನಿರ್ಮಿಸುವುದು | 1 ಸಂ. | 5.00 | |
| 9 | ಜೆ.ಡಿ ರಸ್ತೆಯಿಂದ ಮಾಡಶಿರವಾರ ರಸ್ತೆಯಲ್ಲಿ ಸಿ.ಡಿ. ದುರಸ್ತಿ | 4.50 ಕಿ.ಮಿ | 3.00 | |
| 10 | ವೆಂಕಟೇಶ್ವರ್ ಕ್ಯಾಂಪ್ ನಿಂದ ಹೊಸಳ್ಳಿ ವರೆಗೆ ಸಿ.ಡಿ. ದುರಸ್ತಿ | 1 ಸಂ. | 3.00 | |
| 11 | ಕೆ. ಹೊಸಳ್ಳಿಯಿಂದ ಸತ್ಯನಾರಯಣ ಕ್ಯಾಂಪ್ ರಸ್ತೆಯಲ್ಲಿ ಸಿ.ಡಿ ದುರಸ್ತಿ | 1 ಸಂ. | 3.50 | |
| | ಸಿಂಧನೂರ ತಾಲೂಕ ಒಟ್ಟು ಮೊತ್ತ | | 25.00 | |

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ಪಂ.ರಾ.ಇಂ ಉಪ-ವಿಭಾಗ ಸಿಂಧನೂರು

Deputy Commissioner
Raichur.

ಕಾರ್ಯನಿರ್ವಾಹಕ ಅಭಿಯಂತರರು
ಪಂ.ರಾ.ಇಂ. ವಿಭಾಗ, ರಾಯಚೂರು